

ವಿಶೇಷ ಮಕ್ಕಳಿಗೆಂದೇ ಇದೆ ಆಟದ ಸಾಮಗ್ರಿಗಳು

## ನಂದಗಡ ಬೇಕನ್ ಲೈಬ್ರರಿ

ಬೀಡಿ ಗ್ರಂಥಾಲಯದ ಮಾದರಿಯನ್ನು ಅನುಸರಿಸಿ ಜಿಲ್ಲೆಯ ಹಲವು ಗ್ರಾಮಗಳಲ್ಲೂ ಮಾದರಿ ಗ್ರಂಥಾಲಯಗಳು ಸಿದ್ಧಗೊಂಡಿವೆ. ಬೀಡಿಯಿಂದ 5 ಕಿ.ಮೀ. ದೂರದಲ್ಲಿರುವ ಐತಿಹಾಸಿಕ ನಂದಗಡದಲ್ಲಿ ದೊಡ್ಡದಾದ ವಿಶೇಷ ಮಕ್ಕಳ ಗ್ರಂಥಾಲಯ ಸಿದ್ಧಪಡಿಸಲಾಗಿದೆ.

ಈ ಒಂದೇ ಪಂಚಾಯಿತಿಯಲ್ಲಿ 85 ವಿಶೇಷ ಚೇತನರಿದ್ದಾರೆ. ಪ್ರತಿ ದಿನ ಗ್ರಂಥಾಲಯಕ್ಕೆ ಬರುತ್ತಾರೆ. ಅವರಿಗಾಗಿ ಗಾಲಿ ಕುರ್ಚಿ, ಆಟದ ಸಾಮಗ್ರಿ, ಮೋಜಿನ ಸಾಮಗ್ರಿ, ಶ್ರವಣ ಸಲಕರಣೆಗಳಿವೆ. 11 ಅಂಗನವಾಡಿಗಳು, 11 ಪ್ರಾಥಮಿಕ ಶಾಲೆಗಳು, 3 ಪ್ರೌಢಶಾಲೆಗಳು, 2 ಪದವಿಪೂರ್ವ ಕಾಲೇಜು, 1 ಪದವಿ ಕಾಲೇಜು ಈ ಊರಲ್ಲಿವೆ. ಅವುಗಳಿಗೆ ತಕ್ಕಂತೆ ಗ್ರಂಥಾಲಯ ಅಭಿವೃದ್ಧಿಪಡಿಸಲಾಗಿದೆ.

ಈ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಿದ್ದು ಕೂಡ ಪಿಡಿಒ ಆಗಿದ್ದ ಕೆ.ಎಸ್. ಗಣೇಶ ಅವರೇ.

ಸೌಕರ್ಯಗಳನ್ನು ತರಿಸಿದ್ದಾರೆ. 4000ಕ್ಕೂ ಹೆಚ್ಚು ಪುಸ್ತಕಗಳು, ತುರ್ತು ಸಂದರ್ಭಕ್ಕಾಗಿ ಎಮರ್ಜೆನ್ಸಿ ಲೈಟ್ ಬಳಸಲಾಗುತ್ತಿದೆ. ಕಟ್ಟಡದ ಒಳಗೆ ಬೆಳಕು, ಗಾಳಿ, ಒಳಾಂಗಣ ವಿನ್ಯಾಸದ ವ್ಯವಸ್ಥೆ ಅಚ್ಚುಕಟ್ಟಾಗಿದೆ.




‘ಬೇಕನ್ ಲೈಬ್ರರಿ’ ಘಟಕದಲ್ಲಿ ವಿಶೇಷ ಚೇತನರಿಗಾಗಿ ಪ್ರತ್ಯೇಕ ಪುಸ್ತಕಗಳು, ಬ್ರೈಲ್‌ಲಿಪಿ ಗ್ರಂಥಗಳು, ಬ್ರೈಲ್ ಬರವಣಿಗೆ ಸಾಮಗ್ರಿ, ಬ್ರೈಲ್ ಚೆಸ್‌ಬೋರ್ಡ್, ಬ್ರೈಲ್ ಹಾವು– ಏಣಿ, ಕ್ರಿಕೆಟ್ ಸಾಮಗ್ರಿಗಳಿವೆ. ಇಷ್ಟೆಲ್ಲಕ್ಕೂ ಖರ್ಚಾಗಿದ್ದು ಕೇವಲ ₹15 ಲಕ್ಷ.

### ರಾಜ್ಯದ ಮೊದಲ ಡಿಜಿಟಲ್ ಗ್ರಂಥಾಲಯ

ಬೀಡಿ ಗ್ರಂಥಾಲಯವೇ ರಾಜ್ಯದ ಮೊಟ್ಟ ಮೊದಲ ಡಿಜಿಟಲ್ ಲೈಬ್ರರಿ. ಇಲ್ಲಿ ಡಿಜಿಟಲೀಕರಣ ಆದ ನಂತರ ಜಿಲ್ಲೆಯ ಹಾಗೂ ಹೊರ ಜಿಲ್ಲೆಯ ಇತರ ಗ್ರಂಥಾಲಯಗಳಲ್ಲೂ ಅದನ್ನು ಚಾಲ್ತಿ ಮಾಡಲಾಯಿತು.

ಐದು ಕಂಪ್ಯೂಟರ್, ಎರಡು ನೋಟ್‌ಪ್ಯಾಡ್, ಬ್ರಾಡ್‌ಬ್ಯಾಂಡ್ ಇಂಟರ್ನೆಟ್ ವ್ಯವಸ್ಥೆ ಇದೆ. ಊರಿನಲ್ಲಿ 6ರಿಂದ 18 ವರ್ಷದೊಳಗಿನ 3,600 ಮಕ್ಕಳಿದ್ದಾರೆ. ಅವರೆಲ್ಲರ ಅಭಿರುಚಿಗೆ ತಕ್ಕುದಾದ ಸೌಕರ್ಯ ಒದಗಿಸಲಾಗಿದೆ.


